ಅನ್ನುವ ನಂಬಿಕೆ ಬೇಕು. ಆದರೆ ನನ್ನ ಬರವಣಿಗೆ, ನಮ್ಮಪ್ಪನ ಬರವಣಿಗೆಯ ಅನುಭವದ ಮೇಲೆ ಹೇಳುವುದಾದರೆ ಇದು ಪೀಡಿತ ಆಶಾವಾದ – ನಮ್ಮನ್ನು ಅಂಚಿಗೆ ಸರಿಸಲಾಗಿದೆ, ನಾವು ಎಲ್ಲ ಮುಖ್ಯ ಸಂಗತಿಗಳಿಂದ ಹೊರಗೇ ಉಳಿದುಬಿಟ್ಟಿದ್ದೇವೆ ಅನ್ನುವ ಸಂಶಯಗಳ ಪೀಡನೆಯಿಂದ ಘಾಸಿಗೊಂಡಿರುವ ಆಶಾಭಾವ. ದಾಸ್ತೆಯೇವ್‌ಸ್ಕಿ ಪಶ್ಚಿಮದ ಬಗ್ಗೆ ತನ್ನ ಬದುಕಿನುದ್ದಕ್ಕೂ ಅನುಭವಿಸಿದ ಪ್ರೀತಿ ಮತ್ತು ದ್ವೇಷವನ್ನು ನಾನೂ ಎಷ್ಟೋ ಸಾರಿ ಅನುಭವಿಸಿದ್ದೇನೆ. ಆದರೆ ನನಗೆ ಆಶಾವಾದ ಇರುವುದಕ್ಕೆ ಕಾರಣ ನಾನು ಆ ಮಹಾನ್ ಲೇಖಕನ ಪ್ರೀತಿ ದ್ವೇಷಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ಪಶ್ಚಿಮ ಜಗತ್ತನ್ನು ಅಲೆದಿದ್ದೇನೆ, ಆ ಇನ್ನೊಂದು ಬದಿಯಲ್ಲಿ ಲೋಕವನ್ನು ಹೇಗೆ ಕಟ್ಟಿಕೊಂಡಿದ್ದಾರೆ ಅನ್ನುವುದನ್ನು ಕಂಡಿದ್ದೇನೆ – ಇದೇ ಕಾರಣ.

ಈ ಕೆಲಸಕ್ಕೆ ತಮ್ಮ ಇಡೀ ಬದುಕನ್ನು ಮೀಸಲಿಡುವ ಲೇಖಕರಿಗೆ ಈ ವಾಸ್ತವ ಗೊತ್ತಿರುತ್ತದೆ: ನಮ್ಮ ಮೂಲ ಉದ್ದೇಶ ಏನೇ ಇರಲಿ, ವರ್ಷಗಟ್ಟಲೆ ಆಶಾಭರಿತ ಬರವಣಿಗೆ ಮಾಡಿದ ನಂತರ ಕೊನೆಗೆ ಬೇರೆ ಬೇರೆ ಸ್ಥಳಗಳಿಗೆ ಹೋಗಿಬಿಡುತ್ತೇವೆ. ದುಃಖ, ಕೋಪ ಇಟ್ಟುಕೊಂಡು ನಾವು ಕೆಲಸ ಮಾಡಿದ ಮೇಜಿನಿಂದ ದೂರಕ್ಕೆ ಒಯ್ಯುತ್ತದೆ ನಮ್ಮ ಬರವಣಿಗೆ. ಅದೇ ದುಃಖ ಮತ್ತು ಕೋಪಗಳ ಇನ್ನೊಂದು ಬದಿಗೆ, ಇನ್ನೊಂದು ಲೋಕದೊಳಕ್ಕೆ ಹೊಗುತ್ತೇವೆ. ನಮ್ಮಪ್ಪ ಅಂಥ ಲೋಕಕ್ಕೆ ತಾನೇ ತಲುಪಲಿಲ್ಲವೇ? ನಿಧಾನವಾಗಿ ರೂಪುಗೊಳ್ಳುವ ನೆಲ, ಸುದೀರ್ಘವಾದ ಕಡಲ ಯಾನದ ನಂತರ ಬಗೆಬಗೆಯ ಬಣ್ಣದ ಮೋಡ, ಮಂಜಿನ ನಡುವಿನಿಂದೆದ್ದು ರೂಪತಳೆಯುವ ದ್ವೀಪದ ಹಾಗೆ ಈ ಇನ್ನೊಂದು ಲೋಕ ನಮ್ಮನ್ನು ಮರುಳು ಮಾಡುತ್ತದೆ. ಕವಿದ ಮಂಜಿನೊಳಗಿಂದ ಮೇಲೇಳುವ ಇಸ್ತಾಂಬುಲ್ ನಗರವನ್ನು ನೋಡಲೆಂದು ದಕ್ಷಿಣದಿಂದ ಪ್ರಯಾಣ ಮಾಡಿಬಂದ ಪಾಶ್ಚಾತ್ಯ ಪ್ರಯಾಣಿಕರ ಹಾಗೇ ನಾವೂ ಮರುಳಾಗುತ್ತೇವೆ. ಭರವಸೆ ಮತ್ತು ಕುತೂಹಲಗಳಿಂದ ತೊಡಗಿದ ಪಯಣದ ತುದಿಯಲ್ಲಿ ಮಸೀದಿ, ಮೀನಾರು, ಮನೆ, ಬೀದಿ, ಬೆಟ್ಟ, ಏರು, ಇಳಿಜಾರುಗಳಿರುವ ಇಡೀ ಲೋಕವೇ ಇರುತ್ತದೆ. ಅದನ್ನು ನೋಡುತ್ತ ನಾವೂ ಈ ಜಗತ್ತಿಗೆ ಅಡಿ ಇಡಲು, ಪುಸ್ತಕದ ಓದಿನಲ್ಲಿ ಕಳೆದು ಹೋದ ಹಾಗೇ ಅದರೊಳಗೇ ಕಳೆದು ಹೋಗಲು ಬಯಸುತ್ತೇವೆ. ನಾವು ಹಳ್ಳಿಗರು, ಬಹಿಷ್ಕೃತರು, ಅಂಚಿನಲ್ಲಿರುವವರು ಅಂದುಕೊಳ್ಳುತ್ತ ಕೋಪಗೊಂಡೋ ಆಳವಾದ ವಿಷಾದದಲ್ಲೋ ಮೇಜಿನ ಮುಂದೆ ಬರೆಯಲು ಕುಳಿತವರು ಈ ಭಾವಗಳನ್ನೆಲ್ಲ ಮೀರಿದ ಇಡೀ ಜಗತ್ತನ್ನೇ ಸೃಷ್ಟಿಸಿರುತ್ತೇವೆ.

ನಾನು ಹುಡುಗನಾಗಿದ್ದಾಗ, ಯುವಕನಾಗಿದ್ದಾಗ ಅನ್ನಿಸುತ್ತಿದ್ದುದಕ್ಕೆ ವಿರುದ್ಧವಾದ ಭಾವ ಈಗ ನನ್ನಲಿದೆ: ಇಸ್ತಾಂಬುಲ್ ನನ್ನ ಮಟ್ಟಿಗೆ ಇಡೀ ಜಗತ್ತಿನ ಕೇಂದ್ರ. ನನ್ನ ಇಡೀ ಬದುಕನ್ನು ಅಲ್ಲಿ ಸಾಗಿಸಿದ್ದೇನೆ ಅನ್ನುವುದಷ್ಟೇ ಇದಕ್ಕೆ ಕಾರಣವಲ್ಲ. ಕಳೆದ ಮೂವತ್ತಮೂರು ವರ್ಷಗಳಲ್ಲಿ ನಾನು ಇಸ್ತಾಂಬುಲ್ ಬೀದಿ, ಸೇತುವೆ, ಜನ, ನಾಯಿ, ಮನೆ, ಮಸೀದಿ, ಫೌಂಟನ್ನು, ವಿಚಿತ್ರ ನಾಯಕರು, ಅಂಗಡಿ, ಪ್ರಸಿದ್ಧ ವ್ಯಕ್ತಿಗಳನ್ನೂ, ಅಲ್ಲಿನ ಹಗಲು, ರಾತ್ರಿಗಳನ್ನು ವರ್ಣಿಸುತ್ತ ಅವೆಲ್ಲವೂ ನನ್ನದೇ ಭಾಗವಾಗಿ, ನಾನು ಇಡೀ ಊರನ್ನು ಅಪ್ಪಿ ಆಲಂಗಿಸಿಕೊಂಡಿದ್ದೇನೆ. ನನ್ನ ಕೈಯಿಂದ ನಿರ್ಮಿಸಿದ ಈ ನಗರ, ಕೇವಲ ನನ್ನ ತಲೆಯೊಳಗಷ್ಟೇ ಇದ್ದ ಈ ನಗರ ನಾನು ವಾಸ್ತವವಾಗಿ ಬದುಕಿದ್ದ ನಗರಕ್ಕಿಂತ ಹೆಚ್ಚು ನಿಜ ಅನ್ನಿಸುವ ಗಳಿಗೆಯೂ ಇತ್ತು. ಈ ಎಲ್ಲ ಜನ, ಬೀದಿ, ವಸ್ತು, ಕಟ್ಟಡಗಳೆಲ್ಲ ತಮ್ಮ ತಮ್ಮಲ್ಲೇ ಮಾತಾಡಿಕೊಳ್ಳುವುದಕ್ಕೆ ತೊಡಗುತ್ತಿದ್ದವು. ನಾನು ನಿರೀಕ್ಷಿಸಿರದ ರೀತಿಯಲ್ಲಿ ಸಂವಾದಿಸುತ್ತ, ಅವು ನನ್ನ ಕಲ್ಪನೆಯಲ್ಲೋ ಪುಸ್ತಕದಲ್ಲೋ ಇಲ್ಲ ನಿಜವಾಗಿ ತಮತಮಗಾಗಿಯೇ ಜೀವಂತವಾಗಿವೆ ಅನ್ನಿಸುತ್ತಿತ್ತು. ಸೂಜಿಯಲ್ಲಿ ನೆಲ ಅಗೆದು ಬಾವಿ ತೋಡಿದವನ ಹಾಗೆ ನಾನು